ತಕ್ಕಡಿಯ ಬಳಿಗೆ ಬಂದು ಮಡಿಕೆಯಿಂದ ಒಂದು ಟಂಬ್ಲರ್ ನೀರು ಮೊಗೆದು ಕುಡಿದರು.

'ಏನು ಸೈಕಲನ್ನು ತಕೊಂಡು ಹೋಗ್ತೀಯಾ?' ಎಂದು ಮಾಂಸದ ಅಂಗಡಿಯವರು ಅವನನ್ನು ನೋಡಿ ಕೇಳಿದಾಗ ಮುತ್ತುಸಾಮಿ ತಲೆಯಾಡಿಸಿದ. ಬೀಗ ಹಾಕಿದ್ದ ಸೈಕಲನ್ನು ಅವರೇ ಎತ್ತಿ ತಂದು ಹೊಸಿಲಿನಲ್ಲಿ ಇಟ್ಟರು. ಮತ್ತೆ ಅಂಗಡಿಯ ಹುಡುಗನನ್ನು ಕರೆದು ಅದೇ ಬೀದಿಯಲ್ಲಿದ್ದ ಸೈಕಲ್ ಅಂಗಡಿಯವನನ್ನು ಕರೆದುಬರಲು ಹೇಳಿಕಳುಹಿಸಿದರು. ಪಕ್ಕದಲ್ಲಿದ್ದ ಒಂದು ಬಟ್ಟೆಯನ್ನು ತೆಗೆದು, ದೂಳು ಮೆತ್ತಿಕೊಂಡಿದ್ದ ಸೈಕಲನ್ನು ಅವನು ಒರೆಸಿದ.

ಸೈಕಲ್ ಅಂಗಡಿಯವರು ಬಂದಾಗ ಮಾಂಸದ ಅಂಗಡಿಯವರು ವಿಷಯವನ್ನು ಹೇಳಿದರು. ಅವರು ಸೈಕಲ್ ಬೀಗವನ್ನು ಒಂದು ಕ್ಷಣ ದಿಟ್ಟಿಸಿ ನೋಡಿದರು. ನಂತರ ಚೀಲದಲ್ಲಿದ್ದ ಕಂಬಿಯನ್ನು ತೆಗೆದು ದ್ವಾರದೊಳಗೆ ಮೆಲ್ಲಗೆ ತೂರಿಸಿ ತಿರುಗಿಸಿದರು. ಮರುಕ್ಷಣದಲ್ಲಿ ಕ್ಲಿಕ್ ಎಂಬ ಶಬ್ದದೊಂದಿಗೆ ಬೀಗ ತೆರೆದುಕೊಂಡಿತು. ಇಬ್ಬರಿಗೂ ಧನ್ಯವಾದ ಹೇಳಿ ಅವನು ಸೈಕಲನ್ನು ನೂಕಿದ.

'ಓಡಿಸಿಕೊಂಡು ಹೋಗು ತಮ್ಮ' ಎಂದರು ಅಂಗಡಿಯವರು. ಅವನು ನಾಚಿಕೆಯಿಂದ 'ನನಗೆ ಓಡಿಸಕ್ಕೆ ಬರಲ್ಲ' ಎಂದು ಹೇಳಿದ. ಅಪೂರ್ವವಾದ ದೃಶ್ಯವನ್ನು ನೋಡುವಂತೆ ಅವರು ಅವನನ್ನು ಒಂದುಕ್ಷಣ ನೋಡಿ ನಂತರ ಒಂದು ಸಣ್ಣ ಮುಗುಳ್ನಗೆಯೊಂದಿಗೆ 'ಸರಿ ನಡ್ಕೊಂಡು ಹೋಗು' ಎಂದರು.

**ಎರಡೇ ದಿನದಲ್ಲಿ ಸೈಕಲ್ ಮಾರಿದ ಹಣದೊಂದಿಗೆ ಅಬ್ದುಲ್ ಮಾವ ಬಂದರು. 'ತಕೋಮ್ಮ, ನೂರ ಹತ್ತು ರೂಪಾಯಿ. ಇಷ್ಟೇಮ್ಮ ಸಿಕ್ಕಿದ್ದು.' ಎಂದರು. 'ದೊಡ್ಡವನ ಹತ್ರಾನೆ ಕೊಡಿ ಅಣ್ಣ' ಅಂತ ಅಮ್ಮ ಅವನ ಕಡೆ ಕೈತೋರಿಸಿದಳು. ಅವರು ಕೊಟ್ಟಿದ್ದನ್ನು ಮುತ್ತುಸಾಮಿ ತೆಗೆದುಕೊಂಡು ಮಡಚಿ ಜೇಬಿನಲ್ಲಿಟ್ಟ. ಅಮ್ಮ 'ಅದೇಕಣೋ ನಿನ್ನ ಬಂಡವಾಳ, ಬುದ್ಧಿವಂತಿಕೆಯಿಂದ ಬದಿಕ್ಕೋ' ಎಂದಳು.**

ಮುತ್ತುಸಾಮಿ ಹೇಳಿದ ಸುದ್ದಿಯನ್ನು ಕೇಳಿ ಅಮ್ಮ ಸ್ವಲ್ಪ ಹೊತ್ತು ಗಾಬರಿಯಿಂದ ಹೆಪ್ಪುಗಟ್ಟಿ ನಿಂತರು. ಅಂದು ರಾತ್ರಿ ಅವಳು ಊಟಮಾಡದೆಯೆ ಮಲಗಿಕೊಂಡದ್ದನ್ನು ಮುತ್ತುಸಾಮಿ ಗಮನಿಸಿದ. ಅವಳ ಬಳಿ ಹೋಗಿ ಸಮಾಧಾನ ಹೇಳುವ ಧೈರ್ಯವಿಲ್ಲದೆ ಯಾವುದೋ ಕುರುಡು ಆಲೋಚನೆಗಳೊಂದಿಗೆ ನಿದ್ದೆ ಹೋದ.

ಪಿಯುಸಿಯಲ್ಲಿ 'ಏ' ಗ್ರೂಪ್ ಸಿಗುವುದು ಎಂದು ಎಲ್ಲರೂ ಹೇಳಿದರು. ಟಾಗೂರ್ ಆರ್ಟ್ಸ್ ಕಾಲೇಜಿನಲ್ಲಿ ಅಪ್ಲಿಕೇಷನ್ ತೆಗೆದುಕೊಳ್ಳಲು ಹೋದ ಸ್ನೇಹಿತರೊಂದಿಗೆ ಒಂದು ದಿನ ಮುತ್ತುಸಾಮಿಯೂ ಹೋದ. ಹೋಗುವಾಗ ದಾರಿ ಪೂರ್ತಿ ಒಂದೇ ಹರಟೆ. ಎಲ್ಲರ ಬಳಿ ಭವಿಷ್ಯದ ಬಗ್ಗೆ ಕನಸುಗಳು ತುಂಬಿದ್ದವು. ಎಂಜಿನಿಯರ್ ಕನಸು. ಡಾಕ್ಟರ್ ಕನಸು. ಬ್ಯಾಂಕ್ ಆಫೀಸರ್ ಕನಸು. ಅವನ ಹೊರತು ಎಲ್ಲರೂ ಅಪ್ಲಿಕೇಷನ್ ತೆಗೆದುಕೊಂಡರು. ಒಂದು ಅಪ್ಲಿಕೇಷನ್ ಇಪ್ಪತ್ತು ರೂಪಾಯಿ. 'ಯಾಕೋ ನೀನು ತಕೊಳ್ಳಿಲ್ಲ?' ಎಂದು ಒಬ್ಬ ಕೇಳಿದ.